### ವಿದ್ಯಾರ್ಥಿಗಳಿಗೆ ಸನ್ಮಾನ: ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ

# ಜ್ಞಾನದ ಜತೆ ಜೀವನ ಮೌಲ್ಯ ಕಲಿಸಿ

ಪ್ರಜಾವಾಣಿ ವಾರ್ತೆ

ಹಾವೇರಿ: ಜ್ಞಾನದ ಜತೆಗೆ ಜೀವನ ಮೌಲ್ಯಗಳನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ನೀಡಬೇಕು. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಕರು ಶ್ರಮಿಸಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಸಲಹೆ ನೀಡಿದರು.

ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ತಾಲ್ಲೂಕು ಘಟಕ ಸಹಯೋಗದಲ್ಲಿ ನಗರದ ಗೆಳೆಯರ ಬಳಗ ಪ್ರೌಢಶಾಲೆ ಆವರಣದಲ್ಲಿ ಸೋಮವಾರ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಿ ಅವರು ಮಾತನಾಡಿದರು.

ಶಿಕ್ಷಣ ಸಂಸ್ಥೆಗಳು, ಶಿಕ್ಷಣ ಇಲಾಖೆ, ಶಿಕ್ಷಕರು ಒಂದು ಕುಟುಂಬದಂತೆ ಕೆಲಸ ಮಾಡಬೇಕು. ಸರ್ಕಾರದಿಂದ ವೇತನ ಪಡೆಯುವ ಪ್ರತಿಯೊಬ್ಬ ಶಿಕ್ಷಕನ ಮೇಲೂ ಸಮಾಜದ ಋಣವಿದೆ. ಆ ಋಣವನ್ನು ತೀರಿಸಲು ಮಕ್ಕಳಿಗೆ ಉತ್ತಮವಾದ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.



ಹಾವೇರಿ ನಗರದ ಗೆಳೆಯರ ಬಳಗ ಪ್ರೌಢಶಾಲೆ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭ ಹಾಗೂ ಪ್ರತಿಭಾ ಪುರಸ್ಕಾರ ಪ್ರದಾನ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿದರು

ಸಂಸ್ಕಾರ ಹಾಗೂ ಶಿಕ್ಷಣ ಒಂದು ನಾಣ್ಯದ ಎರಡು ಮುಖಗಳು ಇದ್ದಂತೆ. ವಿದ್ಯಾರ್ಥಿಗಳು ಜ್ಞಾನದ ಜೊತೆಗೆ ಸಂಸ್ಕಾರವನ್ನು ಕಲಿಯಬೇಕು. ತಂದೆ-ತಾಯಿಗಳ ಶ್ರಮವನ್ನು ನೆನಪಿಸಿಕೊಂಡು ವಿದ್ಯಾಭ್ಯಾಸ ಮಾಡಬೇಕು. ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಹೇಳಿದರು.

ಡಿಡಿಪಿಐ ಅಂದಾನಪ್ಪ ವಡಗೇರಿ ಮಾತನಾಡಿ, 'ಕೋವಿಡ್ ಸಂದರ್ಭದಲ್ಲೂ ಶಿಕ್ಷಕರ ಪರಿಶ್ರಮದಿಂದ ಜಿಲ್ಲೆಯ 15 ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಹಾವೇರಿ ತಾಲ್ಲೂಕಿನಲ್ಲಿ ಪರಿಚಯಿಸಲಾದ 'ವರದಾ ಜ್ಞಾನವಾಹಿನಿ' ಯೂಟ್ಯೂಬ್ ಚಾನಲ್ ಅನ್ನು ಜಿಲ್ಲೆಯಾದ್ಯಂತ ವಿಸ್ತರಿಸಿ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲ ಮಾಡಿಕೊಡಲಾಗುವುದು' ಎಂದರು.

**ಮುಖ್ಯಾಂಶಗಳು**

- ಶಿಕ್ಷಣದ ಜತೆಗೆ ಸಂಸ್ಕಾರವೂ ಅಗತ್ಯ
- ವಿದ್ಯಾರ್ಥಿಗಳಿಗೆ ನೆರವಾದ ವರದಾ ಜ್ಞಾನವಾಹಿನಿ
- ಪ್ರತಿ ಶಿಕ್ಷಕರ ಮೇಲೆ ಸಮಾಜದ ಋಣವಿದೆ

ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್. ಪಾಟೀಲ ಮಾತನಾಡಿ, 'ಶಿಕ್ಷಕರು ಇನ್ನೂ ಹೆಚ್ಚು ಶ್ರಮ ವಹಿಸಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಂತಹ ಕೆಲಸವನ್ನು ಮಾಡಬೇಕು' ಎಂದು ತಿಳಿಸಿದರು.

ಡಿಡಿಪಿಯು ಉಮೇಶ, ಶಿಕ್ಷಕರ ಸಂಘದ ಪದಾಧಿಕಾರಿಗಳಾದ ಎಂ.ಬಿ. ರಮೇಶ, ಎಚ್.ಪಿ. ಬಣಕಾರ, ಅಭಿವೃದ್ಧಿ ಉಪನಿರ್ದೇಶಕ ಝಡ್.ಎಂ.ಖಾಜಿ, ಜಿ.ಆರ್.ಭಟ್, ಎನ್.ಐ.ಇಚ್ಚಂಗಿ, ಎಂ.ಎಸ್. ಕೆಂಚನಗೌಡ್ರ, ಸುರೇಶ ಮೂಡಲದವರ, ಎಂ.ಎಸ್. ಮರಿಗೌಡ್ರ, ಎನ್.ಎನ್ ಕುಂದೂರ, ಸಾಹಿತಿ ಸತೀಶ ಕುಲಕರ್ಣಿ ಇದ್ದರು.

Prajavani 31.08.2021

Prajavani 31.08.2021

## ಕಿಡಿನುಡಿ



**ಬೇರೆ ದೇಶಗಳಲ್ಲಿ ಸರ್ಕಾರ ಬದಲಾದರೂ ಶಿಕ್ಷಣ ನೀತಿಗಳು ಬದಲಾಗುವುದಿಲ್ಲ. ನಮ್ಮ ದೇಶದಲ್ಲಿ ಸರ್ಕಾರ ಬದಲಾದಂತೆ ಶಿಕ್ಷಣ ನೀತಿಗಳು ಬದಲಾಗುತ್ತವೆ. ಇದರಿಂದ ಶಿಕ್ಷಣ ಕ್ಷೇತ್ರಕ್ಕೆ ತೊಂದರೆಯಾಗುತ್ತದೆ.**

**ಬಸವರಾಜ ಹೊರಟ್ಟಿ,** ವಿಧಾನ ಪರಿಷತ್ ಸಭಾಪತಿ

# ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ ಸಿಗಲಿ

## ರಾಷ್ಟ್ರೀಯ ಶಿಕ್ಷಣ ನೀತಿ: ಬಸವರಾಜ ಹೊರಟ್ಟಿ ಅಭಿಮತ

ಪ್ರಜಾವಾಣಿ ವಾರ್ತೆ

**ಹಾವೇರಿ:** 'ಹೊಸ ಶಿಕ್ಷಣ ನೀತಿ ಬಗ್ಗೆ ವಿಸ್ತೃತವಾದ ಅಧ್ಯಯನವಾಗಬೇಕು. ಕೆಲವು ಅಂಶಗಳು ತಿದ್ದುಪಡಿಯಾಗಬೇಕು. ನರ್ಸರಿ ಮತ್ತು ಶಾಲಾ ಶಿಕ್ಷಕರ ತರಬೇತಿ ಬೇರೆ ಬೇರೆಯಾದ್ದರಿಂದ, ಎರಡನ್ನೂ ಒಟ್ಟುಗೂಡಿಸುವುದು ಸರಿಯಲ್ಲ' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಮಾಧ್ಯಮ ಪ್ರತಿನಿಧಿಗಳೊಂದಿಗೆ ಅವರು ಮಾತನಾಡಿ, 'ಮೊದಲಿದ್ದ ಶಾಲಾ ತರಗತಿಗಳ ವರ್ಗೀಕರಣವೇ (ಪ್ರಾಥಮಿಕ, ಮಾಧ್ಯಮಿಕ, ಪ್ರೌಢ) ಸರಿಯಿತ್ತು. ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಸಿಗಬೇಕು' ಎಂದರು.

ಈ 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿ' ನಮ್ಮ ದೇಶದಲ್ಲಿ ಮೂರನೆಯದ್ದು. 1948ರಲ್ಲಿ ರಾಧಾಕೃಷ್ಣನ್ ಅವರು ಮೊದಲ ವರದಿ ಕೊಟ್ಟರು. 1952ರಲ್ಲಿ ರಂಗಸ್ವಾಮಿ ಮೊದಲಿಯಾರ್ ಎರಡನೇ ವರದಿ ಕೊಟ್ಟರು. 1964ರಲ್ಲಿ ಕೊಠಾರಿ ವರದಿ ಸಲ್ಲಿಕೆಯಾಯಿತು. ನಂತರ ಪ್ರಧಾನಿ ಇಂದಿರಾಗಾಂಧಿ ಅವರು ಮೊಟ್ಟಮೊದಲ ರಾಷ್ಟ್ರೀಯ ಶಿಕ್ಷಣ ಯೋಜನೆ ಜಾರಿಗೆ ತಂದರು. ನಂತರ ರಾಜೀವ್‌ಗಾಂಧಿ, ಈಗ ಪ್ರಧಾನಿ ನರೇಂದ್ರ ಮೋದಿ ಅವರು 3ನೇ ಬಾರಿಗೆ ಹೊಸ ಶಿಕ್ಷಣ ನೀತಿ ಜಾರಿಗೆ ತಂದಿದ್ದಾರೆ ಎಂದು ಹೇಳಿದರು.

ಶಾಲೆ ಆರಂಭದ ಬಗ್ಗೆ ಪ್ರತಿಕ್ರಿಯಿಸಿ, 'ಶಾಲೆ ಪ್ರಾರಂಭ ಮಾಡಲು ನಾನೇ ಸರ್ಕಾರಕ್ಕೆ ಹೇಳಿದ್ದೆ. ಶಾಲೆ ಬಂದ್ ಆದಾಗ ಮಕ್ಕಳು ಮತ್ತು ಶಾಲೆಯ ಸಂಬಂಧ ಕಡಿದು ಹೋಯಿತು. ಎಲ್ಲರನ್ನೂ ಪಾಸ್ ಮಾಡುತ್ತಾರೆ ಎಂಬುದು ಮಕ್ಕಳ ತಲೆಗೆ ಬಂದಿದೆ. ಇದು ಅಪಾಯಕಾರಿ ಬೆಳವಣಿಗೆ. ಶಾಲಾ ಮಕ್ಕಳನ್ನು ವರ್ಗೀಕರಿಸಿ, ಹಂತ ಹಂತವಾಗಿ ಭೌತಿಕ ತರಗತಿ ನಡೆಸುವುದು ಸೂಕ್ತ ಎಂದರು.

### ಸಂಬಳ ನೀಡದೆ ಶಿಕ್ಷಕರಿಗೆ ಕಿರುಕುಳ

ಖಾಸಗಿ ಶಾಲೆಗಳ ಶಿಕ್ಷಕರು ಸಂಬಳವಿಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಬಗ್ಗೆ ಪರ್ತಕರ್ತರ ಪ್ರಶ್ನೆಗೆ ಉತ್ತರಿಸಿ, 'ಅನುದಾನರಹಿತ ಶಾಲೆಗಳ ಕೆಲವು ಆಡಳಿತ ಮಂಡಳಿಗಳು ಶಿಕ್ಷಕರಿಗೆ ಕಿರುಕುಳ ನೀಡುತ್ತಿವೆ. ಇಂಗ್ಲಿಷ್ ಮಾಧ್ಯಮ ಇದ್ದಲ್ಲಿ ಸ್ವಲ್ಪ ಪಗಾರ ಕೊಡುತ್ತಿದ್ದಾರೆ. ಕನ್ನಡ ಮಾಧ್ಯಮವಿದ್ದ ಕಡೆ ಸಂಬಳ ಕೊಡುತ್ತಿಲ್ಲ. ನಾನು ಶಿಕ್ಷಣ ಸಚಿವನಾಗಿದ್ದಾಗ ₹500 ಕೋಟಿ ಬಿಡುಗಡೆ ಮಾಡಿಸಿದ್ದೆ. ಶಿಕ್ಷಕರಿಗೆ ಕನಿಷ್ಠ ಸಂಬಳ ಕೊಡಬೇಕು ಎಂಬ ನಿಯಮವಿದ್ದರೂ ಕೆಲವು ಆಡಳಿತ ಮಂಡಳಿಗಳು ಪಾಲಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

Prajavani 31.08.2021